ಕೆ.ಪಿ.ಎಲ್. ನೌಕರರ ಹಾಗೂ ಕಾರ್ಮಿಕರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವುದು.

916 - ಶ್ರೀ ಬಿ.ಹೆಚ್. ಬನ್ನಿಕೋಡ (ಹಿರೇಕೆರೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್‌ನಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ನೌಕರರನ್ನು ಹಾಗೂ ಕಾರ್ಮಿಕರನ್ನು ಕೆ.ಪಿ.ಎಲ್. ಮುಚ್ಚಿದ್ದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಉದ್ಯೋಗದ ಭರವಸೆ ಕೊಡಲು ಯೋಚಿಸಿದೆಯೇ?*

ಆ) *ಹಾಗಿದ್ದಲ್ಲಿ ಯಾವ ರೀತಿಯ ನೌಕರಿ ಒದಗಿಸಲಾಗುವುದು?*

ಇ) *ಸದರಿಯವರಿಗೆ ಸರ್ಕಾರಿ ನೌಕರಿ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್ ಇನ್ನೂ ನಡೆಯುತ್ತಿದೆ. ಇನ್ನು ನಡೆಯುತ್ತಿರುವುದರಿಂದ ನೌಕರರ ಈ ವಿಷಯ ಪರಿಗಣಿಸಲು ಅವಕಾಶ ಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಶುವೈದ್ಯ ಶಾಲೆಗಳಲ್ಲಿ ವೀರ್ಯ ದಾಸ್ತಾನು.

1524 - ಶ್ರೀ ಜಿ. ರಾಜುಗೌಡ (ಹನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃತಕ ಗರ್ಭಧಾರಣೆಗೆ ಸಾಕಷ್ಟು ವೀರ್ಯ ದಾಸ್ತಾನು ರಾಜ್ಯದ ಪಶುವೈದ್ಯ ಶಾಲೆಗಳಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇದರಿಂದ ಜಾನುವಾರುಗಳಿಗೆ ಸಕಾಲದಲ್ಲಿ ಗರ್ಭದಾನ ಮಾಡದೆ, ಪಶು ಸಂತತಿ ಕ್ಷೀಣಿಸುವುದಿಲ್ಲವೆ?*

ಇ) *ಇದರ ಬದಲು ಗ್ರಾಮಕ್ಕೊಂದು ಬೀಜದ ಹೋರಿಯನ್ನು ಸಾಕುವವರಿಗೆ ಪ್ರೋತ್ಸಾಹ ಧನ ಕೊಡುವ ವ್ಯವಸ್ಥೆ ಮಾಡಲಾಗುವುದೇ?*

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಐ.ಆರ್.ಡಿ.ಪಿ. ಸಾಲದ ಬಗ್ಗೆ.

76 - ಶ್ರೀಮತಿ. ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೂಡಿಗೆರೆ ತಾಲ್ಲೂಕಿನಲ್ಲಿ 89-90ನೇ ಇಸವಿಯಲ್ಲಿ ಎಷ್ಟು ಜನರಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಸಾಲ ಸೌಲಭ್ಯಕ್ಕಾಗಿ ಶಿಫಾರಸ್ಸು ಮಾಡಲಾಗಿದೆ.*

ಆ) *ಶಿಫಾರಸ್ಸು ಮಾಡಲ್ಪಟ್ಟವರಲ್ಲಿ ಹರಿಜನ ಗಿರಿಜನರೆಷ್ಟು? ಹಾಗೂ ಇತರ ವರ್ಗದವರೆಷ್ಟು?*